**OS 72/2024**

ಪಿಡಬ್ಲ್ಯೂ1

ದಿನಾಂಕ 25.11.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲು ಃ ಪ್ರತಿವಾದಿ ಪರಃ ಶ್ರೀ ಆರ್ ಆರ್ ವಕೀಲರಿಂದಃ

ದಾವಾ ಆಸ್ತಿ ರಾಮ್ ಭಟ್ ರವರಿಗೆ ಸೇರಿದ ಆಸ್ತಿ ಎಂದರೆ ಸರಿ. ದಾವಾ ಆಸ್ತಿಯ ಮನೆಯನ್ನು ಏಪ್ರೀಲ್ 1983 ರಲ್ಲಿ ನನ್ನ ತಂದೆ ರಿಪೇರಿ ಮಾಡಿರುತ್ತೇನೆ. ಆ ರೀತಿ ರಿಪೇರಿ ಮಾಡುವ ಪೂರ್ವದಲ್ಲಿ ಅವರ ಒಪ್ಪಿಗೆಯನ್ನು ಪಡೆದುಕೊಂಡಿರುವುದಿಲ್ಲ. ದಾವಾ ಆಸ್ತಿಯ ತೀರ್ವೆ ನನ್ನ ತಂದೆ ಶೀನ ಶೆಟ್ಟಿಗಾರ್ ರವರ ಹೆಸರಿನಲ್ಲಿ ಇದೆ. ತೀರ್ವೆಯನ್ನು ರಾಮ್ ಭಟ್ ರವರು ಕಟ್ಟುತ್ತಿದ್ದಾರೆ ಎಂದರೆ ಸರಿಯಲ್ಲ. ವಿದ್ಯುತ್ ಸಂಪರ್ಕವು ರಾಮ್ ಭಟ್ ಹೆಸರಿನಲ್ಲಿ ಇದೆ ಎಂದರೆ ಸರಿಯಲ್ಲ. ರಾಮ್ ಭಟ್ ರವರ ಮಗ ಪ್ರತಿವಾದಿ ಎಂದರೆ ಸರಿ. ಪ್ರತಿವಾದಿ ಯಾವಾಗ ಮೃತಪಟ್ಟಿರುತ್ತಾರೆ ಎಂದು ಗೊತ್ತಿಲ್ಲ. ಅವರಿಗೆ ಜಯಂತಿ ವಾದಿರಾಜ್ ಎಂಬ ಒಬ್ಬಳೇ ಮಗಳು ಇರುತ್ತಾಳೆ. ನನಗೆ ದಾವಾ ಆಸ್ತಿ ಹಾಗೂ ಮನೆಯಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಈ ದಾವೆ ವಜಾವಾಗ ತಕ್ಕ ದಾವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

1 ನೇ ಹೆ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ